# 34. ರೇಶ್ಮೆ ಕೃಷಿಯಲ್ಲಿ ಹಿಪ್ಪು ನೇರಳೆ ಟಾನಿಕ್

ಹೆಸರು ಮತ್ತು ವಿಳಾಸ :ಶ್ರೀ ಮುತ್ತೇಶ ಶಿವಪ್ಪ ಬಿದರಣ್ಣನವರ
ಗ್ರಾಮ: ಆಲದಕಟ್ಟಿ
ತಾ: ಹಾನಗಲ್ ಜಿ: ಹಾವೇರಿ
ಮೊ: 8762725651 / 9902225651

## ತಾಂತ್ರಿಕ ವಿಶೇಷತೆಗಳು



- ಹಿಪ್ಪು ನೇರಳೆ ಬೆಳೆಯಲ್ಲಿ ಆರೋಗ್ಯವಾದ ಎಲೆಗಳು ಮತ್ತು ಎಲೆಗಳ ಗಾತ್ರ ರೇಷ್ಮೆ ಕೃಷಿಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ.
- ಹಿಪ್ಪು ನೇರಳೆ ಎಲೆಗಳ ಗಾತ್ರ ಮತ್ತು ಸಂಖ್ಯೆಗಳನ್ನು ಹೆಚ್ಚಿಸಲು ಹಿಪ್ಪು ನೇರಳೆ ಟಾನಿಕ್‌ನ ತಯಾರಿಕೆ.



- ಹಿಪ್ಪು ನೇರಳೆ ಟಾನಿಕ್ ತಯಾರಿಸಲು, 1 ಕಿ. ಗ್ರಾಂ. ಆರೋಗ್ಯಕರವಾದ ಹಿಪ್ಪು ನೇರಳೆ ಸೊಪ್ಪಿಗೆ ಅರ್ಧದಿಂದ ಮುಕ್ಕಾಲು ಕಿ. ಗ್ರಾಂ. ಕರಿಬೆಲ್ಲ ಮಿಶ್ರಣ ಸೇರಿಸಿ ಗಾಳಿಯಾಡುವ ಡಬ್ಬದಲ್ಲಿ ಹಾಕಬೇಕು. 3 ದಿನಗಳ ನಂತರ ಮಿಶ್ರಣವನ್ನು ದಿನಕ್ಕೊಂದು ಬಾರಿ 21 ದಿನಗಳವರೆಗೆ ಕಲಕುತ್ತಿರಬೇಕು.



- 21 ದಿನಗಳ ನಂತರಈ ಹಿಪ್ಪೆ ನೇರಳೆ ಸೊಪ್ಪಿನಿಂದ ತಯಾರಾದ ಸಸ್ಯಜನ್ಯ ಟಾನಿಕ್‌ನ್ನು ಹಿಪ್ಪು ನೇರಳೆ ಗಿಡಗಳಿಗೆ ನೀರಿನೊಂದಿಗೆ ಬೆರೆಸಿ ಸಿಂಪರಣೆ. ಸಿಂಪರಣೆಗೆ ಅಂದಾಜು 1 ಲೀ. ನೀರಿಗೆ 1.5 ರಿಂದ 2 ಮಿ.ಲೀ. ಹಿಪ್ಪು ನೇರಳೆ ಟಾನಿಕ್ ಹಾಕಿ ಸಿಂಪರಣೆ.
- ಇದರಿಂದ ಹಿಪ್ಪು ನೇರಳೆ ಎಲೆಗಳು ಸಮೃದ್ಧವಾಗಿ ಹಾಗೂ ಆರೋಗ್ಯಕರವಾಗಿ ಬೆಳೆಯುತ್ತವೆ.

ಮಾಹಿತಿಯ ಮೂಲ: ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ